ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸುವುದು

2095 (1100); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವಲ್ಲಿ ಸರ್ಕಾರದ ನಿರ್ಧಾರ ಯಾವ ಹಂತದಲ್ಲಿದೆ:

ಆ) ಇದುವರೆಗೆ ರಾಜ್ಯದಲ್ಲಿ ತಾಲ್ಲೂಕುವಾರು ಎಷ್ಟು ಪ್ರಸ್ತಾವನೆಗಳು ಸರ್ಕಾರಕ್ಕೆ ಸಲ್ಲಿಸಲ್ಪಟ್ಟಿವೆ (ತಾಲ್ಲೂಕುವಾರು ವಿವರ ನೀಡುವುದು);

ಇ) ಹಾವೇರಿ ಜಿಲ್ಲೆಯಲ್ಲಿ ಯಾವ ಯಾವ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ಸರ್ಕಾರದ ಆದೇಶ ಸಂಖ್ಯೆ: ಕಂಇ 46 ಭೂದಾಪು 2013, ದಿನಾಂಕ: 20–07–2013 ರಲ್ಲಿ ತಾಂಡಾ, ಕಾಲೋನಿ, ಕ್ಯಾಂಪ್‌ಗಳು, ಬೋವಿಹಟ್ಟಿ, ಗೊಲ್ಲರಹಟ್ಟಿ ಇತ್ಯಾದಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸಲು ಆದೇಶ ಹೊರಡಿಸಲಾಗಿದ್ದು. ಈ ಆದೇಶದಲ್ಲಿನ ಹಾಗೂ ಇತರೆ ಷರತ್ತುಗಳನ್ನು ಪೂರೈಸುವಂತಹವುಗಳನ್ನು ಒಳಗೊಂಡ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಪ್ರಾದೇಶಿಕ ಆಯುಕ್ತರುಗಳಿಗೆ ನಿರ್ದೇಶನವನ್ನು ನೀಡಲಾಗಿರುತ್ತದೆ. ಇವರುಗಳಿಂದ ಪೂರ್ಣ ಪ್ರಮಾಣದ ಪ್ರಸ್ತಾವನೆಯು ಸ್ವೀಕೃತವಾದ ನಂತರ ಅರ್ಹ ಪ್ರಕರಣಗಳಲ್ಲಿ ತಾಂಡಾ, ಕಾಲೋನಿ, ಕ್ಯಾಂಪ್‌ಗಳು, ಬೋವಿಹಟ್ಟಿ, ಗೊಲ್ಲರಹಟ್ಟಿ ಇತ್ಯಾದಿಗಳನ್ನು ಕಂದಾಯ ಗ್ರಾಮಗಳನ್ನಾಗಿ ರಚಿಸಲಾಗುವುದು.

ಆ) ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಹಾವೇರಿ ತಾಲ್ಲೂಕು

1. ಬಾಲಾಜಿನಗರ

2. ಸೋಮನಕಟ್ಟೆ

ಬ್ಯಾಡಗಿ ತಾಲ್ಲೂಕು

1. ಗಾಂಧಿ ನಗರ

2. ಕಿಶನ್ ನಗರ

ಹಾನಗಲ್ ತಾಲ್ಲೂಕು

1. ದೇವಿಕೊಪ್ಪ

2. ವೆಂಕಟೇಶಪುರ

3. ಬಸವಪುರ

4. ಸೇವಾಲಾಲ್ ನಗರ

5. ದುರ್ಗಾಪುರ

ಸವಣೂರು ತಾಲ್ಲೂಕು

1. ಕೃಷ್ಣನಗರ

ಕಂಇ 89 ಭೂದಾಪು 2014ಕ್ಕೆ ಅನುಬಂಧ ಕಂದಾಯ ಗ್ರಾಮಗಳನ್ನಾಗಿ ಅಧಿಸೂಚಿಸುವುದಕ್ಕೆ ಸಂಬಂಧಿಸಿದಂತೆ ಸರ್ಕಾರದಲ್ಲಿ ಸ್ವೀಕೃತವಾಗಿರುವ ಪ್ರಸ್ತಾವನೆಗಳ ವಿವರ				
ಕ್ರ.ಸಂ	ಜಿಲ್ಲೆ	ತಾಲ್ಲೂಕು		ಸಂಖ್ಯೆ
1	ಬೀದರ್	1	ಬೀದರ್	1
		2	ಔರಾದ್ (ಬಿ)	19
		3	ಹುಮನಾಬಾದ್	5
		4	ಬಸವಕಲ್ಯಾಣ	19
		5	ಭಾಲ್ಕಿ	47
2	ಬೆಳಗಾವಿ	6	ಬೆಳಗಾವಿ	25
		7	ಖಾನಾಪುರ	3
		8	ಹುಕ್ಕೇರಿ	6
		9	ಬೈಲಹೊಂಗಲ	2
		10	ಗೋಕಾಕ್	16
		11	ರಾಮದುರ್ಗ	14
		12	ಅಥಣಿ	17
3	ಧಾರವಾಡ	13	ಕಲಘಟಗಿ	6
4	ಗದಗ್	14	ಶಿರಹಟ್ಟಿ	4
5	ಉತ್ತರ ಕನ್ನಡ	15	ಮುಂಡಗೋಡ	1
6	ಹಾವೇರಿ	16	ಹಾವೇರಿ	2
		17	ಬ್ಯಾಡಗಿ	2
		18	ಹಾನಗಲ್	3
		19	ರಾಣೆಬೆನ್ನೂರು	5
		20	ಸವಣೂರು	1
7	ಬಾಗಲಕೋಟೆ	21	ಬಾದಾಮಿ	4

8	ಚಿಕ್ಕಮಗಳೂರು	22	ಕಡೂರು	6
9	ರಾಯಚೂರು	23	ದೇವದುರ್ಗ	3
		24	ಲಿಂಗಸುಗೂರು	4
		25	ರಾಯಚೂರು	1
10	ಶಿವಮೊಗ್ಗ	26	ಸಾಗರ	1
11	ಮೈಸೂರು	27	ಹೆಚ್.ಡಿ.ಕೋಟೆ	1
		ಒಟ್ಟು		218

ಹೊಸದಾಗಿ ಮಾಸೂರ ಹೋಬಳಿ ರಚನೆ ಮಾಡುವುದು

2096 (1101); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನಲ್ಲಿನ ಮಾಸೂರನ್ನು ಹೋಬಳಿ ಕೇಂದ್ರವನ್ನಾಗಿ ರಚನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಮಾಸೂರ ಹೋಬಳಿ ರಚನೆ ಮಾಡಲಾಗುವುದು?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) & (ಆ) ಮಾಸೂರನ್ನು ಹೋಬಳಿಯನ್ನಾಗಿ ಅಧಿಸೂಚಿಸಲು ಅನುವಾಗುವಂತೆ ದಿನಾಂಕ: 13-03-2014ರ ಪತ್ರದಲ್ಲಿ ಪೂರ್ಣ ಪ್ರಮಾಣದ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ ಇವರಿಗೆ ನಿರ್ದೇಶಿಸಲಾಗಿರುತ್ತದೆ. ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಸ್ವೀಕೃತವಾದ ನಂತರ ನಿಯಮಾನುಸಾರ ಪರಿಶೀಲಿಸಿ ಮಾಸೂರನ್ನು ಹೋಬಳಿ ಕೇಂದ್ರವನ್ನಾಗಿ ಅಧಿಸೂಚಿಸಲು ಕ್ರಮ ವಹಿಸಲಾಗುವುದು.